ಇದನ್ನೇ ಸೂಚಿಸುವಂಥದ್ದು. ಈ ಬಾಯಾರಿಕೆಯೇ ಬೇರೆ. ಅದಕ್ಕೇ ಈ ಪುಸ್ತಕದಲ್ಲಿ ಪ್ರಮೀಳಾ ಅವರು "ಬಾಳೆ ಹೂವಿನ ಚಟ್ನಿ" ಅಂದಾಗ ಅದು ವಿವಿಧ ಧ್ವನಿಗಳನ್ನು ಹೊರಡಿಸುತ್ತದೆ.

ಒಂದು ಪದಾರ್ಥದ ರುಚಿಯನ್ನು ವಿವರಿಸುವುದು ಅಥವಾ ವರ್ಣಿಸುವುದು ಹೇಗೆ ಅಸಾಧ್ಯವೋ ಹಾಗೆ ಪಕ್ವವಾದ ವಿಶೇಷ ಬರವಣಿಗೆಯೊಂದು ಹೇಗೆ ಏಕೆ ಇಷ್ಟವಾಯಿತು ಅಂತ ಹೇಳುವುದು ಕಷ್ಟ. ಅದು ಉಕ್ಕಿಸುವ ಅಲೆಗಳು ಮಾತ್ರ ಸತ್ಯ. ಪುಸ್ತಕದ ಹೊದಿಕೆಯ ಸೇಪಿಯಾ ವರ್ಣದ ಹಳೆ ಛಾಯಾಚಿತ್ರಗಳು, ಲೇಖಕಿಯ ಕೈಬರಹ, ಒಳಪುಟಗಳಲ್ಲಿ ಅಲ್ಲಲ್ಲಿ ಎದುರುಗೊಳ್ಳುವ ಜನಪದೀಯ ಅರ್ಚನೆಯ ಸೊಲ್ಲುಗಳು ('ವಾಲೆ ಹೊಳೆದಾವೋ ಬಿಸಿಲಿಗೆ...', 'ಬಳೆಯ ತೊಡುವಾಗ ಬಳಗಕ್ಕೆ ಹೇಳ್ಬ್ಯಾಳ...', 'ಸುತ್ತಾಲಾ ಪರ್ಸೆ ಮೆರೆದಾವೋ...') ಎಲ್ಲ ಸೇರಿ ಒಂದು ಆಪ್ತವಾದ ಆಚರಣೆಯ ಭೂಮಿಕೆಯನ್ನು ಏರ್ಪಡಿಸುತ್ತವೆ. ಗಂಡುಬೀರಿ ಎನಿಸಿಕೊಂಡಿದ್ದ ಎಳೆ ಪ್ರಮೀಳಾಳ 'ಕನ್ಯಾ ಸಮಾರಂಭ'ದ ಅಧ್ಯಾಯದ ಕೆಲ ಸಾಲುಗಳ ಉದ್ಧರಣೆಯೊಂದಿಗೆ ಈ ಸ್ಪಂದನವನ್ನು ಮುಗಿಸುತ್ತೇನೆ.

"ನನಗೆ ಮತ್ತು ನನ್ನ ಸ್ನೇಹಿತೆ ಊರ್ಮಿಳೆಗೆ (ತಿಂಡಿ ಗುಳುಂ ಮಾಡಿ ಮಾಯವಾದ ಎದುರು ಮನೆ ಹುಡುಗಿ) ಈಶ್ವರ–ಪಾರ್ವತಿ ಅಲಂಕಾರ ಮಾಡಿದರು. ನನಗೆ ಪಾರ್ವತಿ ವೇಷ ಹಾಕಿಲ್ಲವೆಂದು ಅಸಮಾಧಾನ. ಕೆ.ಆರ್. ಪೇಟೆ ಸಾಬರ ಅಂಗಡಿಯಲ್ಲಿ ಸಿಗುವ ಮೇಕಪ್ ಕಡ್ಡಿಗಳನ್ನು ತರಿಸಿ ನೀರಿನಲ್ಲಿ ಬೇರೆ ಬೇರೆಯಾಗಿ ಅದ್ದಿಟ್ಟಿದ್ದರು. ಚೆನ್ನಾಗಿ ಬಳಿದರು. ಮುಖಕ್ಕೆ ಚಮಕಿ ಅಂಟಿಸಿದರು. ತುಟಿಗೆ ರಂಗೆಂದರೆ ಕುಂಕುಮವನ್ನೇ ಹಚ್ಚುತ್ತಿದ್ದರು. ಜವರ, ನಿಂಗಿ ಸಂಭ್ರಮದಿಂದ ತಮ್ಮ ಮನೆಯ ಸಮಾರಂಭವೇನೊ ಎನ್ನುವಂತೆ ಓಡಾಡುತ್ತಿದ್ದರು. ಆಗಾಗ ಜವರ ನನ್ನನ್ನು ಕೀಟಲೆ ಮಾಡುತ್ತಿದ್ದ, 'ಅಮ್ಮಾವ್ರೆ, ಇನ್ನು ನೀವೆಲ್ಲೂ ಹೋಗುವ ಹಾಗಿಲ್ಲ. ಮನೆಯಲ್ಲಿ ಅಡಿಗೆ ಮಾಡಿಕೊಂಡು ಇರಬೇಕು."

ಕವಿತೆ



ಕಲೆ: ಡಿ.ಕೆ. ರಮೇಶ್

# ಈ ಕುಲುಮೆ

ಇದರೊಳಗೆ ದೇವರಾಣೆ
ಒಂದಿನಿತೂ ಬೆಂಕಿಚೂರಿಲ್ಲ
ಸುಡು ಸುಡುವ ಕೆಂಡವಿಲ್ಲ
ಶಿಕ್ಷೆಯೆಂದವರು ಅದರೊಳಗೆ ದೂಡಿದರೂ
ಹೆದರದಿರು
ಸುಟ್ಟುಕೊಳ್ಳುವ ಭಯವಿಲ್ಲ
ಎಲ್ಲ ಕುಲುಮೆಗಳಂತಲ್ಲ
ಈ ಕುಲುಮೆ.

ಈ ಕುಲುಮೆಯೊಳಗೆ
ಆಳ ಅಗಲ ವಿಸ್ತಾರವೆಲ್ಲವೂ
ಕೇವಲ ಖಾಲಿ ಖಾಲಿ.
ತಣ್ಣಗಿನ ಉಸಿರು ಗಟ್ಟಿಸುವ ಮೌನ.
ಅಷ್ಟೇ!

● ರೂಪ ಹಾಸನ